


**ಫೂ**

(ಕಥಾಸಂಕಲನ)

**ಲೇ:** ಮಂಜುನಾಯಕ ಚಳ್ಳೂರು

**ಪು:** 80

**ಬೆ:** ₹ 80

**ಪ್ರ:** ಅಹರ್ನಿಶಿ ಪ್ರಕಾಶನ

ಜ್ಞಾನವಿಹಾರ ಬಡಾವಣೆ, ಕಂಟ್ರಿ ಕ್ಲಬ್ ಎದುರು, ವಿದ್ಯಾನಗರ, ಶಿವಮೊಗ್ಗ

ದೂರವಾಣಿ: 9449174662

ಸುಮ್ಮನಾಗುವ ಪ್ರಬುದ್ಧತೆ ಇಲ್ಲಿನ ಹಲವು ಕತೆಗಳಿಗಿವೆ. ಆರಂಭದ ಕತೆಗಾರರಲ್ಲಿ ಇಂತಹ ಗುಣ ಅಪರೂಪ. 'ತೇರು ಸಾಗಿತಮ್ಮ ನೋಡಿರೆ...' ಎಂಬ ಕತೆಯಲ್ಲಿ ಕೇವಲ ಭಜನೆಯ ಹಾಡುಗಳನ್ನು ಹೇಳುತ್ತಲೇ ಇರುವ, ಸ್ವಲ್ಪ ಮನಃಸ್ಥಿತಿ ಅಳ್ಳಕಗೊಂಡಿರುವ, ಊರವರಿಂದ 'ಹುಚ್‌ಶೈಲಾ' ಎಂದು ಕರೆಸಿಕೊಳ್ಳುವ ಹರೆಯದ ಹುಡುಗನ ಚಿತ್ರಣವಿದೆ. ಅವನ ಬದುಕನ್ನು ಹೇಳುತ್ತಲೇ ಊರಿನ ಸ್ಥಿತಿಯನ್ನೂ ತಿಳಿಸುವುದಷ್ಟೇ ಇಲ್ಲಿಯ ಉದ್ದೇಶವಾಗಿದೆ. ಕತೆಯನ್ನು ಯಾವುದೇ 'ಮೆಲೋಡ್ರಾಮಾ'ಕ್ಕೆ ಒಯ್ಯುವ ಹಪಹಪಿ ಕತೆಗಾರನಿಗಿಲ್ಲ. ಅದೇ ರೀತಿ 'ವಜ್ರಮುನಿ' ಕತೆಯಲ್ಲಿ ಬಂಕದಲ್ಲಿಯೇ ಕಲ್ಲಾಗಿ ಕುಳಿತುಬಿಟ್ಟ ಅಪ್ಪನ ಚಿತ್ರವಿದೆ. 'ಖತಲ್ ರಾತ್ರಿ'ಯಲ್ಲಿ ಉತ್ತರ ಕರ್ನಾಟಕದ ವಿಶಿಷ್ಟ ಮೊಹರಂ ಹಬ್ಬದ ಆಚರಣೆಯ ಹಿನ್ನೆಲೆಯನ್ನು ಹೇಳುತ್ತಲೇ ತಂದೆ ಕಳೆದುಕೊಂಡ ಮಕ್ಕಳು ಮತ್ತು ವಿಧವೆ ತಾಯಿಯ ಸಂಕಟವನ್ನೂ ಬಿಚ್ಚಿಡಲು ಪ್ರಯತ್ನಿಸುತ್ತದೆ. ವಿಷ ಕುಡಿದು ಸತ್ತ ಅಪ್ಪನಾಗಲಿ, ಬಂಕದಲ್ಲಿ ತಳವೂರಿ ಬದುಕಿಗೆ ವಿಮುಖನಾದ ಅಪ್ಪನಾಗಲಿ ಈ ಕತೆಗಾರನಲ್ಲಿ ದ್ವೇಷ, ಸಿಟ್ಟನ್ನು ಮೂಡಿಸುವುದಿಲ್ಲ ಎನ್ನುವುದು ಬಹಳ ಆರೋಗ್ಯಕರ ಸಂಗತಿ. ಯಾವ ಪಾತ್ರವನ್ನೂ ತನ್ನ ಹತೋಟಿಯಲ್ಲಿಡಲು ಹೋಗಿಲ್ಲ. ಎಲ್ಲ ಪಾತ್ರಗಳನ್ನೂ ಮಾನವೀಯತೆಯಿಂದ ಕಾಣುವುದು ಅವರಿಗೆ ಸಾಧ್ಯವಾಗಿದೆ.

ಕತೆಯ ಎಲ್ಲವನ್ನೂ ಹೇಳಿಬಿಟ್ಟು ಖಾಲಿಯಾಗುವ ಜಾಯಮಾನ ಮಂಜುನಾಯಕ ಚಳ್ಳೂರರದಲ್ಲ. ಅತ್ಯಂತ ಮಿತವಾಗಿ ಕತೆ ಬಿಚ್ಚುತ್ತಾ, ಯಾವ ಅವಸರಕ್ಕೂ ಒಳಗಾಗದೆ ವಿವರಗಳನ್ನು ನೀಡುತ್ತಾ, ಓದುಗರಿಗೆ ಹಲವು ಸಾಧ್ಯತೆಗಳನ್ನು ಊಹಿಸಿಕೊಳ್ಳುವ ಸ್ವಾತಂತ್ರ್ಯ ಕೊಡುವುದು ಇವರ ಕಥನದ ರೀತಿ. 'ಪಾತಿ' ಎನ್ನುವ ತುಸು ದೀರ್ಘವಾದ ಕತೆಯಲ್ಲಿ ಎರಡು ಯುವ ಮನಸ್ಸುಗಳ ನಡುವೆ ನಡೆಯುವ ಸಂಗತಿಗಳನ್ನು ಆತ್ಮೀಯವಾಗಿ ಹೇಳುತ್ತಲೇ